ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. 831/2020

ಸಿ.ಡಬ್ಲ್ಯೂ -9, ಪಿ.ಡಬ್ಲ್ಯೂ-4

ದಿಃ **24.02.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಜಯಪ್ರಕಾಶ್ ಡಿ ಬಿ |
| ಗಂಡ/ತಂದೆಯ ಹೆಸರು | ಭೈರನಾಯಕ ಜೆ |
| ವಯಸ್ಸು | 42 ವರ್ಷ |
| ಕೆಲಸ | ಪೊಲೀಸ್ ಇನ್ಸ್‌ಪೆಕ್ಟರ್ ದಕ್ಷಿಣ ವಲಯ ಕಛೇರಿ |
| ವಾಸಸ್ಥಳ | ಮೈಸೂರು |

**<u>ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:</u>**

ನಾನು ಜುಲೈ 2019 ರಿಂದ ಫೆಬ್ರವರಿ 2021 ರವರೆಗೆ ಬಿಳಿಕೆರೆ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ08.08.2020 ರಂದು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿದ್ದಾಗ ಉಂಡುವಾಡಿ ಗ್ರಾಮದ ಸೋಮಶೇಖರ ಬಿನ್ ವೆಂಕಟರಾಮೇಗೌಡ ಎಂಬುವವರು ಮಾರಮ್ಮ ದೇವಸ್ಥಾನದ ಹಿಂಭಾಗ ಸಾರ್ವಜನಿಕ ರಸ್ತೆಯಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆಂದು ತಿಳಿಸಿದ ಮೇರೆಗೆ ನ್ಯಾಯಾಲಯ ಅನುಮತಿ ಪಡೆದಿರುತ್ತೇನೆ. ಚಾಸಾ 2 ಮತ್ತು 3 ರವರಿಗೆ ಮಾಹಿತಿಯನ್ನು ತಿಳಿಸಿ, ನಂತರ ನಾನು ಚಾಸಾ3 ರಿಂದ 5 ಇಲಾಖಾ ಜೀಪ್ ನಂ. ಕೆಎ 09 ಜೆ 575 ರಲ್ಲಿ ಬಾತ್ಮಿದಾರರು ನೀಡಿದ ಮಾಹಿತಿಯ ಮೇರೆಗೆ ಉಂಡುವಾಡಿ ಗ್ರಾಮಕ್ಕೆ 1.30 ಗಂಟೆಗೆ ಹೋಗಿ ಜೀಪನ್ನು ನಿಲ್ಲಿಸಿ ಮರೆಯಲ್ಲಿ ನಿಂತು ನೋಡಿದಾಗ ಒಬ್ಬ ಆಸಾಮಿಯು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಮಧ್ಯದ ಪ್ಯಾಕೆಟ್ ಗಳನ್ನು ಇಟ್ಟುಕೊಂಡಿದ್ದು ಕಂಡುಬಂದಿರುತ್ತದೆ. ಸದರಿ ಆಸಾಮಿಯ ಹೆಸರು,ವಿಳಾಸ ವಿಚಾರಿಸಿದಾಗ ಸೋಮಶೇಖರ ಬಿನ್ ವೆಂಕಟರಾಮೇಗೌಡ ಎಂದು ತಿಳಿಸಿದನು. ನಂತರ ಪಂಚರ ಸಮಕ್ಷಮ ಪರಿಶೀಲಿಸಿ 90 ಎಂ ಎಲ್ ನ 38 ಒರಿಜಿನಲ್ ಚಾಯ್ಸ್ ವಿಸ್ಕಿ ಪ್ಯಾಕೆಟ್ ಗಳಿದ್ದು, ಆಸಾಮಿ ಯಾವುದೇ ರೀತಿಯ ರಹದಾರಿ ಇಲ್ಲದೇ ಅಕ್ರಮವಾಗಿ ಮಧ್ಯದ ಪ್ಯಾಕೆಟ್ ಗಳನ್ನು ಮಾರಾಟ ಮಾಡಲು ಇಟ್ಟುಕೊಂಡಿದ್ದು ನಂತರ 38 ವಿಸ್ಕಿ ಪ್ಯಾಕೆಟ್ ಗಳನ್ನು ಬಿಳಿ ಬಣ್ಣದ ಬ್ಯಾಗ್ ನಲ್ಲಿ ಹಾಕಿ ಪಿ ಎಂಬ ಅಕ್ಷರದಿಂದ ಮೊಹರು ಮಾಡಲಾಯಿತು. ಅವುಗಳನ್ನು ಪಂಚರ ಸಮಕ್ಷಮ ಮಧ್ಯಾಹ್ನ 1.35 ರಿಂದ 2.35 ಗಂಟೆವರೆಗೆ ಅಮಾನತ್ತುಪಡಿಸಿಕೊಂಡೆವು. ಸಾಕ್ಷಿ ನಿಪಿ1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ1(ಡಿ) ಎಂದು ಗುರುತಿಸಲಾಯಿತು.

ನಂತರ ಮಧ್ಯಾಹ್ನ 3.30 ಗಂಟೆಗೆ ಠಾಣೆಗೆ ಬಂದು ಸ್ವವರದಿ ತಯಾರಿಸಿ ಠಾಣಾ ಮೊಕದ್ದಮೆ ಸಂಖ್ಯೆ 192/2020 ರಲ್ಲಿ ಪ್ರಕರಣವನ್ನು ದಾಖಲಿಸಿ ಪ್ರ ವ ವರದಿಯನ್ನು ತಯಾರಿಸಿ ಘನ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಸ್ವವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಸ್ವವರದಿಯನ್ನು ನಿಪಿ3 ಮತ್ತು ಸಾಕ್ಷಿ ಸಹಿಯನ್ನು ನಿಪಿ3(ಎ) ಎಂದು ಗುರುತಿಸಲಾಯಿತು. ಪ್ರ ವ ವರದಿಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಪ್ರ ವ ವರದಿಯನ್ನು **ನಿಪಿ4** ಮತ್ತು ಸಾಕ್ಷಿ ಸಹಿಯನ್ನು **ನಿಪಿ4(ಎ)** ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು ಮಾ 1 ನ್ನು ನೋಡಿ ಗುರುತಿಸಿದ್ದಾರೆ.

ಅದೇ ದಿನ ಚಾಸಾ1 ರಿಂದ 4 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಆರೋಪಿಗೆ 41(ಎ) ರೀತ್ಯಾ ನೋಟಿಸ್ಸನ್ನು ನೀಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ13.08.2020 ರಂದು ಎಫ್ ಎಸ್ ಎಲ್ ಗೆ ಮಧ್ಯದ ಪ್ಯಾಕೆಟ್ ಗಳನ್ನು ಚಾಸಾ6 ರವರ ಮೂಲಕ ಪರಿಶೀಲನೆಗಾಗಿ ಕಳುಹಿಸಿರುತ್ತೇನೆ. ಅದೇ ದಿನ ಚಾಸಾ6 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿಃ19.09.2020 ರಂದು ಎಫ್ ಎಸ್ ಎಲ್ ನಿಂದ ವರದಿ ಪಡೆದು ಆರೋಪಿಯ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ಎಫ್ ಎಸ್ ಎಲ್ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ5 ಹಾಗೂ ಸಾಕ್ಷಿ ಸಹಿಯನ್ನು ನಿಪಿ5(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದಿಂದ ಪಡೆದ ಅನುಮತಿ ಪತ್ರವನ್ನು ನಿಪಿ6 ಮತ್ತು ಸಾಕ್ಷಿ ಸಹಿಯನ್ನು ನಿಪಿ6(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿದ್ದಾರೆ.

**<u>ಪಾಟೀಸವಾಲು ಆರೋಪಿ ಪರ ಶ್ರೀ ಎಂ ಎ ವಕೀಲರಿಂದಃ</u>**

ನಾವು ದಾಳಿಗೆ ಹೋಗುವ ಮುನ್ನ ಠಾಣಾ ದಿನಚರಿ ಪುಸ್ತಕದಲ್ಲಿ ನಮೂದಿಸಿರುತ್ತೇವೆ. ನಾವು ಆರೋಪಿಯನ್ನು ಹಿಡಿಯಲು ಹೋದಾಗ ಆತನು ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟ ಆದರೆ ನಾವು ಆತನನ್ನು ಹಿಡಿದುಕೊಂಡೆವು. ಈ ಬಗ್ಗೆ ನಾನು ದೂರಿನಲ್ಲಾಗಲೀ ಅಥವಾ ನಿಪಿ1 ರಲ್ಲಾಗಲೀ ನಮೂದು ಮಾಡಿಲ್ಲ. ಆ ರೀತಿ ನಮೂದು ಮಾಡಲು ಯಾವುದೇ ತೊಂದರೆ ಇರಲಿಲ್ಲ. ಮು ಮಾ 1 ರಲ್ಲಿ ಇರುವ ಮಧ್ಯದ ಪ್ಯಾಕೆಟ್ ಗಳ ಬ್ಯಾಚ್ ನಂಬರ್, ಸೀರಿಯಲ್ ನಂಬರ್ ಹಾಗೂ ತಯಾರಾದ ದಿನಾಂಕವನ್ನು ನಿಪಿ1 ರಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಒಂದು ಗ್ರಾಮದಲ್ಲಿ ಪೊಲೀಸರು ಬಂದು ಮಹಜರ್ ಮಾಡಿದರೆ ಹಲವಾರು ಜನರು ಸ್ಥಳದಲ್ಲಿ ಸೇರುತ್ತಾರೆ ಎಂದರೆ ಸರಿ. ಸ್ಥಳದಲ್ಲಿ ಇದ್ದ ಜನರನ್ನು ಸಾಕ್ಷಿದಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ

ಮುಂದುವರಿದು ಸ್ಥಳೀಯರನ್ನು ಸಾಕ್ಷಿದಾರರನ್ನಾಗಿ ಮಾಡಿದರೆ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುವುದರಿಂದ ಅವರನ್ನು ಪಂಚರನ್ನಾಗಿ ಮಾಡಿರುವುದಿಲ್ಲ. ನಾವು ನ್ಯಾಯಾಲಯದ ಅನುಮತಿ ಪಡೆದು ಆರೋಪಿಯ ಅಂಗಶೋಧನೆ ಮಾಡಿರುತ್ತೇವೆ. ಆರೋಪಿಯ ಅಂಗಶೋಧನೆ ಮಾಡಿದಾಗ ಯಾವುದೇ ಹಣ ಸಿಕ್ಕಿರುವುದಿಲ್ಲ. ಆರೋಪಿಯ ಬಳಿ ಹಣವಿಲ್ಲದ ಬಗ್ಗೆ ನಿಪಿ1 ರಲ್ಲಿ ನಮೂದು ಮಾಡಲು ಯಾವುದೇ ತೊಂದರೆ ಇರಲಿಲ್ಲ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ನೀಡಿರುವುದಿಲ್ಲ. 41(ಎ) ಅಡಿಯಲ್ಲಿ ನೋಟಿಸ್ಸನ್ನು ಜಾರಿ ಮಾಡಿ ಆರೋಪಿಯನ್ನು ಬಿಡುಗಡೆ ಮಾಡಿರುತ್ತೇನೆ. ಆ ಸಮಯದಲ್ಲಿ ಕೋವಿಡ್ ಇದ್ದ ಕಾರಣ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿರುತ್ತೇನೆ. ನೀವು ಹೇಳಿರುವ ಹಾಗೆ ಆರೋಪಿ ಯಾವುದೇ ವಸ್ತುಗಳನ್ನು ಇಟ್ಟುಕೊಂಡಿರಲಿಲ್ಲ ಹಾಗೂ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನೀವು ನಿಪಿ1 ರ ಪ್ರಕಾರ ಯಾವುದೇ ಮಹಜರ್ ಕ್ರಮ ಜರುಗಿಸಿ ಮು ಮಾ 1 ನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನೀವು ನಿಮ್ಮ ಇಲಾಖೆಯ ಅಂಕಿಅಂಶಕೋಸ್ಕರ ಈ ಪ್ರಕರಣವನ್ನು ಹೂಡಿದ್ದೀರಿ ಎಂದರೆ ಸರಿಯಲ್ಲ. ಮು ಮಾ 1 ನ್ನು ನೀವು ಈ ಪ್ರಕರಣಕೋಸ್ಕರ ಸೃಷ್ಟಿಸಿದ್ದೀರಿ ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ6 ರಲ್ಲಿ ದಿನಾಂಕವನ್ನು ತಿದ್ದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ಯಾವುದೇ ಅಂಗಶೋಧನೆ ಮಾಡಿರುವುದಿಲ್ಲ ಮತ್ತು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.